ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in

ಡಿಎಸ್ಇಆರ್‌ಟಿ
DSERT

Phone : 080 - 26422372, 26422373, 26422374, Fax - 26422377

ಸಂ: ETC–6/ಎಜು.ವಾ.ವೇ.ಪಟ್ಟಿ/09/17–18

ದಿನಾಂಕ: 18.07.2018

## ಸುತ್ತೋಲೆ

**ವಿಷಯ : ಎಜುಸ್ಯಾಟ್ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ವಿವಿಧ ಹಂತಗಳ ಶೈಕ್ಷಣಿಕ ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಬಗ್ಗೆ.**

ಡಿ.ಎಸ್.ಇ.ಆರ್.ಟಿ. ಹಬ್ ಮೂಲಕ ಎಜುಸ್ಯಾಟ್ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತಿದ್ದು ಪ್ರಮುಖವಾಗಿ ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಾಮರಾಜನಗರ, ಯಾದಗಿರಿ, ಮತ್ತು ಗುಲ್ಬರ್ಗಾ ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಅದೇ ರೀತಿ 2018–19ನೇ ಸಾಲಿನಿಂದ ಎಜುಸ್ಯಾಟ್ ಕಾರ್ಯಕ್ರಮವನ್ನು ದಿನಾಂಕ:20–07–2018ರಿಂದ ಕಾರ್ಯಕ್ರಮ ಪ್ರಾರಂಭಿಸಲಾಗುವುದು. ಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಅಧಿಕಾರಿಗಳು ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಈ ಕೆಳಕಂಡಂತೆ ಸೂಕ್ತ ಕ್ರಮ ವಹಿಸುವುದು.

1. ಪ್ರಸಾರಕ್ಕೆ ಸಂಬಂಧಿಸಿದ ಉಪಕರಣಗಳನ್ನು ಪ್ರಸಾರಪೂರ್ವದಲ್ಲಿ ಸಿದ್ಧಪಡಿಸಿಕೊಂಡಿರಬೇಕು.
2. ಪ್ರಸಾರದ ವೇಳಾಪಟ್ಟಿಯನ್ನು ಎಜುಸ್ಯಾಟ್ ಕೊಠಡಿಯಲ್ಲಿ ಪ್ರದರ್ಶಿಸಿರಬೇಕು.
3. ಎಜುಸ್ಯಾಟ್ ಪಾಠಗಳನ್ನು ಸಾಮರ್ಥ್ಯವಾರು ಆಯ್ಕೆ ಮಾಡಲಾಗಿದೆ.
4. ಪ್ರಸರವಾಗುವ ಪಾಠದಲ್ಲಿ ಆಯ್ಕೆ ಮಾಡಿದ ಸಾಮರ್ಥ್ಯದ ಜೊತೆಗೆ ಇನ್ನುಳಿದ ಸಾಮರ್ಥ್ಯಗಳನ್ನು ಶಿಕ್ಷಕರು ಗಮನಿಸಿ ಪಾಠ ಪ್ರಸಾರದ ನಂತರ ಮಕ್ಕಳಿಗೆ ತಿಳಿಯಪಡಿಸಬೇಕು.
5. ಕೆಲವೊಂದು ಅವಧಿಗಳಲ್ಲಿ ವಿದ್ಯಾರ್ಥಿಗಳ ಜ್ಞಾನವರ್ಧನೆಗಾಗಿ ಇತರೆ ಸಿ.ಡಿ.ಗಳನ್ನು ಬಳಸಲಾಗಿದೆ.
6. ಕಾರ್ಯಕ್ರಮದಲ್ಲಿ 4 ರಿಂದ 8ನೇ ತರಗತಿಯವರೆಗೆ ಭಾಷೆ ಮತ್ತು ಕೋರ್ ವಿಷಯಗಳಲ್ಲಿ ಪಾಠ ಪ್ರಸಾರ ಮಾಡಲಾಗುವುದು.
7. ಪಾಠ ಪ್ರಸಾರವಾಗುವ ದಿನಾಂಕ, ಸಮಯ, ವಿಷಯ ಹಾಗೂ ಪಾಠಗಳ ವಿವರಗಳನ್ನೊಳಗೊಂಡ ಎಲ್ಲಾ ವೇಳಾ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ಅದರಂತೆ ಕ್ರಮವಹಿಸುವುದು.
8. ಶಾಲೆಗಳಲ್ಲಿ ಎಜುಸ್ಯಾಟ್ ಕೊಠಡಿಯಿದ್ದು, ಕಾರ್ಯಕ್ರಮ ಪ್ರಸಾರವಾಗುವುದಕ್ಕೆ 5 ನಿಮಿಷ ಮೊದಲು ಸಂಬಂಧಿಸಿದ ಮಕ್ಕಳನ್ನು ಕರೆದು ಕೊಠಡಿಯಲ್ಲಿ ಕುಳ್ಳಿರಿಸುವುದು.
9. ಆಯಾ ವಿಷಯ ಶಿಕ್ಷಕರು ಪಾಠದ ಸ್ವೀಕೃತಿಗಾಗಿ ಸೂಕ್ತವಾದ ಸಿದ್ಧತೆಯನ್ನು ಮುಂಚಿತವಾಗಿ ಮಾಡಿಕೊಳ್ಳತಕ್ಕದ್ದು.
10. ಪಾಠ ಪ್ರಸಾರವಾಗುವ ಮೊದಲು ಪೂರ್ವ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಿಸುವುದು.
11. ಪ್ರಸಾರ ಕಾಲದಲ್ಲಿ ವಿದ್ಯಾರ್ಥಿಗಳು ಅಗತ್ಯ ಟಿಪ್ಪಣಿಗಳನ್ನು ಮಾಡಿಕೊಳ್ಳುವಂತೆ ಸೂಚಿಸುವುದು.
12. ಪಾಠ ಪ್ರಸಾರದಲ್ಲಿನ ಸಂದೇಹಗಳನ್ನು ಟಿಪ್ಪಣಿ ಮಾಡಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸುವುದು.
13. ಪಾಠ ಪ್ರಸಾಠದ ನಂತರ 10 ನಿಮಿಷಗಳ ಅವಧಿಯಲ್ಲಿ ಮಕ್ಕಳೊಂದಿಗೆ ವಿಷಯ ಕುರಿತು ಚರ್ಚಿಸಿ ಸಂದೇಹಗಳನ್ನು ಬಗೆ ಹರಿಸುವುದು.
14. ಪ್ರಸಾರೋತ್ತರ ಚಟುವಟಿಕೆಗಳನ್ನು ಈ ಹಿಂದೆ ನೀಡಿರುವ ಕೈಪಿಡಿಯನ್ನು ಆಧರಿಸಿ ಕಡ್ಡಯವಾಗಿ ಮಾಡಿಸುವುದು.
15. ಮುಂದಿನ ದಿನಗಳಲ್ಲಿ ಯಾವ ಪಾಠ ಯಾವ ಸಮಯದಲ್ಲಿ ಪ್ರಸಾರವಾಗುತ್ತದೆ ಎಂಬುದನ್ನು ಸೂಚಿಸುವುದು.
16. ಪ್ರಸಾರದ ನಂತರ ನಿಗಧಿಪಡಿಸಿದ ಪುಸ್ತಕದಲ್ಲಿ ಪಾಠದ ಕುರಿತು ಅಭಿಪ್ರಾಯ / ಹಿಮ್ಮಾಹಿತಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ದಾಖಲಿಸುವುದು.

17. ಎಜುಸ್ಯಾಟ್ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಿಮ್ಮಾಹಿತಿಯನ್ನು ಪಡೆಯಲು A.M.S ನ್ನು ಅನುಷ್ಠಾನಗೊಳಿಸಿದ್ದು ಈ ಸುತ್ತೋಲೆಯೊಂದಿಗೆ ಅಡಕಗೊಳಿಸಿರುವ ನಮೂನೆಯಲ್ಲಿ ಸೂಚಿಸಿರುವಂತೆ ಮೊಬೈಲ್‌ನಲ್ಲಿ ನಮೂದಿಸಿ ಸಲ್ಲಿಸಲು ತಿಳಿಸಿದೆ.

**ಉಪನಿರ್ದೇಶಕರು(ಅಭಿವೃದ್ಧಿ)/ ಉಪನಿರ್ದೇಶಕರು(ಆಡಳಿತ),ಮುಖ್ಯೋಪಾಧ್ಯಾಯರು, ಬಿಆರ್.ಸಿ., ಬಿ.ಇ.ಓ, ಸಿ.ಆರ್.ಪಿ, ಜವಾಬ್ದಾರಿಗಳು:-**

1. ಕಾರ್ಯಕ್ರಮಕ್ಕೆ ಸಂಬಂಧಿಸಿದ ಸುತ್ತೋಲೆ ಮತ್ತು ವೇಳಾಪಟ್ಟಿಯನ್ನು ಎಲ್ಲಾ ಶಾಲೆಗಳಿಗೆ ವಿತರಿಸಲು ಕ್ರಮ ವಹಿಸುವುದು.
2. ವೇಳಾಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಪಡೆಯಲು ಲಭ್ಯವಿರುವ ಸಂಚಿತ ನಿಧಿಯಿಂದ ಖರ್ಚನ್ನು ಭರಿಸುವಂತೆ ಶಾಲಾ ಮುಖ್ಯ ಶಿಕ್ಷಕರಿಗೆ ತಿಳಿಸುವುದು.
3. ಶಾಲೆಗಳಲ್ಲಿ ಕಾರ್ಯಕ್ರಮ ಪ್ರಸಾರ ಕುರಿತಂತೆ ವೇಳಾಪಟ್ಟಿ ಅನುಸಾರ ಸೂಕ್ತ ಕ್ರಮ ಕೈಗೊಳ್ಳುವುದು.
4. ಸಭೆಗಳಲ್ಲಿ ಕಾರ್ಯಕ್ರಮ ಕುರಿತು ಮಾಹಿತಿ ನೀಡುವುದು.
5. ಸ್ವೀಕೃತಿ ಕೇಂದ್ರದಲ್ಲಿ ಸಣ್ಣಪುಟ್ಟ ತಾಂತ್ರಿಕ ದೋಷಗಳಿದ್ದಲ್ಲಿ ಸರಿಪಡಿಸಲು ಸೂಕ್ತ ಕ್ರಮವಹಿಸುವುದು.
6. ಸ್ಥಳೀಯ ದಾನಿಗಳಿಂದ ಅದಕ್ಕಾಗಿ ಸಹಾಯ ಪಡೆಯುವುದು.
7. ಜಿಲ್ಲಾ ಹಂತ ಬ್ಲಾಕ್ ಹಂತದಲ್ಲಿ ಅಧಿಕಾರಿಗಳು ಶಾಲೆಗಳನ್ನು ಹಂಚಿಕೊಂಡು ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮಾಡುವುದು.
8. ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಉಪನಿರ್ದೇಶಕರು(ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರು ತಮ್ಮ ಕ್ಷೇತ್ರದಲ್ಲಿ ಎಜುಸ್ಯಾಟ್ ಕಾರ್ಯಕ್ರಮ ಪ್ರಸಾರ ಕುರಿತಂತೆ ಮಾಹಿತಿಯನ್ನು ಹೊಂದಿರುವುದು.
9. ಮಾಸಿಕವಾಗಿ ರಾಜ್ಯ ಕಛೇರಿಗೆ ಕಾರ್ಯಕ್ರಮದ ಪ್ರಗತಿಯನ್ನು ಸಲ್ಲಿಸುವುದು.
10. ಈ ಸುತ್ತೋಲೆಯೊಂದಿಗೆ ಅಡಕಗೊಳಿಸಿರುವ A.M.S (Automated Monitoring System) ನಮೂನೆಯನ್ನು ತಮ್ಮ ಜಿಲ್ಲಾ/ತಾಲ್ಲೂಕುಗಳ ವ್ಯಾಪಿಯ ಎಲ್ಲಾ ಪ್ರಾಥಮಿಕ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೀಡಿ, ಹಿಮ್ಮಾಹಿತಿಯನ್ನು ನಮೂನೆಯಲ್ಲಿ ಸೂಚಿಸಿರುವಂತೆ ಮೊಬೈಲ್‌ನಲ್ಲಿ ನಮೂದಿಸಿ ಸಲ್ಲಿಸಲು ತಿಳಿಸಿದೆ.

ಹೆಚ್.ಎನ್.ಗೋಪಾಲಕೃಷ್ಣ
ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು-560085

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಅಭಿವೃದ್ಧಿ ರವರಿಗೆ ಮಾಹಿತಿಗಾಗಿ.
2. ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ, ಚಾಮರಾಜನಗರ, ಯಾದಗಿರಿ ಮತ್ತು ಗುಲ್ಬರ್ಗಾ ಜಿಲ್ಲೆಗಳ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ.
3. ಇತರೆ ಜಿಲ್ಲೆಗಳಲ್ಲಿ ಎಜುಸ್ಯಾಟ್ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದಲ್ಲಿ ವೇಳಾಪಟ್ಟಿಯನ್ನು ಅನುಸರಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

## Syntax for Automated Monitoring System of EDUSAT Programme

### Karnataka EDUSAT

TP - Teachers presence during telecast Yes / No

SP - No. of students attended (3 digit)

LC - Has the lesson been completed in the Class Yes / No

LE - Usefulness of the Lesson (1, 2, 3, 4)
1) Not Useful, 2) Satisfactory, 3) Very Useful, 4) Effective

If '1' or '2' needs improvement in
1. Content coverage
2. Content presentation
3. Examples

TQ - Quality single digit (1,2,3,4,)
1) Good, 2) Average, 3) Poor, 4) Not Transmitted

RE - Reasons (any 4)

1. ROT receiving
2. Transistor
3. Electricity
4. UPS
5. Improper installation of dish antenna
6. Poor signal quality
7. TV may not be working
8. Solar Panel.

**Test case Description**

1. Send an SMS in format on 161

   EDUSAT <space> L1 <space>TP-Y,SP-100,LC-Y,LE-1:2,TQ-1

2. Send an SMS in format on 161

   EDUSAT <space>L2<space>TP-Y,SP-100,LC-N,RE-1:2:4:6